**ಕರ್ನಾಟಕ ವಿಧಾನ ಪರಿಷತ್ತು**
**143 ನೇ ಅಧಿವೇಶನ 2021**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **1019**
**ಮಾನ್ಯ ಸದಸ್ಯರ ಹೆಸರು** : **ಡಾ॥ ವೈ.ಎ. ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು)**
**ಉತ್ತರಿಸುವ ದಿನಾಂಕ** : **10-03-2021**
**ಉತ್ತರಿಸುವ ಸಚಿವರು** : **ಮಾನ್ಯ ಉಪ ಮುಖ್ಯಮಂತ್ರಿಗಳು, ಲೋಕೋಪಯೋಗಿ ಇಲಾಖೆ**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ರಾಜ್ಯದಲ್ಲಿನ ಟೋಲ್ ಪ್ಲಾಜಾಗಳ ಸಂಖ್ಯೆ ಎಷ್ಟು; (ವಿವರಗಳನ್ನು ನೀಡುವುದು) | ಅ) **ಕೆ.ಆರ್.ಡಿ.ಸಿ.ಎಲ್ ಹಾಗೂ ಕೆಶಿಫ್ ಸಂಸ್ಥೆಗಳಿಂದ ಅಭಿವೃದ್ಧಿ ಪಡಿಸಿರುವ** 19 ರಸ್ತೆಗಳಲ್ಲಿ ಬಳಕೆದಾರರ ಶುಲ್ಕವನ್ನು (User Fee) ಸಂಗ್ರಹಣೆ ಮಾಡಲು ಉದ್ದೇಶಿಸಿದ್ದು, ಈ ಪೈಕಿ 10 ರಸ್ತೆಗಳಲ್ಲಿ ಶುಲ್ಕ ಸಂಗ್ರಹಣೆಯಾಗುತ್ತಿದೆ. (ವಿವರಗಳನ್ನು ಅನುಬಂಧ -1 ರಲ್ಲಿ ನೀಡಿದೆ)<br>ಆ) **ಹುಡ್ಕೋ (HUDCO) ಸಾಲದ ನೆರವಿನಲ್ಲಿ ಅಭಿವೃದ್ಧಿ ಪಡಿಸಲಾಗಿರುವ** 2 ರಸ್ತೆಯ ಪೈಕಿ 1 ರಸ್ತೆಯಲ್ಲಿ ಶುಲ್ಕ ಸಂಗ್ರಹಣೆಯಾಗುತ್ತಿದೆ. (ವಿವರಗಳನ್ನು ಅನುಬಂಧ -1 ರಲ್ಲಿ ನೀಡಿದೆ)<br>ಇ) **ಕೆ.ಆರ್.ಡಿ.ಸಿ.ಎಲ್. ವತಿಯಿಂದ ಕೈಗೊಂಡ 4 ರಸ್ತೆಗಳಲ್ಲಿ ಪಿಪಿಪಿ-ಡಿಬಿಎಫ್ಒಟಿ-ವಿಜಿಎಫ್** ರಸ್ತೆಗಳಲ್ಲಿ ನಿರ್ಮಾಣ ವೆಚ್ಚವನ್ನು ರಿಯಾಯಿತಿದಾರರು ಹೂಡಿಕೆಮಾಡಿ ಅಭಿವೃದ್ಧಿ ಪಡಿಸಿದ್ದು, ಸರ್ಕಾರದ ಅನುಮತಿಯಂತೆ ಸದರಿ ರಸ್ತೆಗಳಲ್ಲಿ ರಿಯಾಯಿತಿದಾರು ನಿರ್ಧಿಷ್ಟ ಅವಧಿಯ ವರೆಗೆ ಶುಲ್ಕ ಸಂಗ್ರಹಣೆಯಾಗುತ್ತಿದೆ. (ವಿವರವನ್ನು ಅನುಬಂಧ -1 ರಲ್ಲಿ ನೀಡಿದೆ)<br>ಈ) **ವಿಶ್ವಬ್ಯಾಂಕ್ ನೆರವಿನ ಹೈಬ್ರಿಡ್ ಆನ್ಯೂಟಿ ಯೋಜನೆಯಡಿಯಲ್ಲಿ ಕೆ.ಆರ್.ಡಿ.ಸಿ.ಎಲ್ ನಿಂದ ಅಭಿವೃದ್ಧಿ ಪಡಿಸಲಾದ** 6 ರಸ್ತೆಗಳ ಪೈಕಿ 5 ರಸ್ತೆಗಳಲ್ಲಿ ಬಳಕೆದಾರರ ಶುಲ್ಕ ಸಂಗ್ರಹಣೆಯಾಗುತ್ತಿದೆ. (ವಿವರವನ್ನು ಅನುಬಂಧ -1 ರಲ್ಲಿ ನೀಡಿದೆ)<br><br>ಒಟ್ಟು ಕೆ.ಆರ್.ಡಿ.ಸಿ.ಎಲ್ ವತಿಯಿಂದ 20 ರಸ್ತೆಗಳಲ್ಲಿ ಶುಲ್ಕ ಸಂಗ್ರಹಣೆಯಾಗುತ್ತಿದೆ. ಪ್ರತಿ ರಸ್ತೆಗಳಲ್ಲಿ ಇರುವ ಟೋಲ್ ಪ್ಲಾಜಾಗಳ ಸಂಖ್ಯೆಯ ವಿವರವನ್ನು ಅನುಬಂಧ -2 ರಲ್ಲಿ ನೀಡಿದೆ. |
| (ಆ) | ಮೇಲ್ಕಂಡ ಟೋಲ್ ಪ್ಲಾಜಾಗಳು ಯಾವ ದಿನಾಂಕದಿಂದ ಕಾರ್ಯರಂಭ ಮಾಡಿವೆ ಹಾಗೂ ಯಾವ ದಿನಾಂಕದಿಂದ ಶುಲ್ಕವನ್ನು ವಸೂಲಿ ಮಾಡಲಾಗುತ್ತಿದೆ | ಟೋಲ್ ಪ್ಲಾಜಾಗಳು ಕಾರ್ಯರಂಭ ದಿನಾಂಕ ಮತ್ತು ಟೋಲ್ ಶುಲ್ಕ ವಸೂಲಿ ಪ್ರಾರಂಭದ ದಿನಾಂಕದ ವಿವರಗಳನ್ನು ಅನುಬಂಧ -2 ರಲ್ಲಿ ನೀಡಿದೆ. |
| (ಇ) | ಸದರಿ ಟೋಲ್ ಪ್ಲಾಜಾಗಳಲ್ಲಿ ಇದೂವರೆವಿಗೆ ಸಂಗ್ರಹಿಸಲಾದ ಮೊತ್ತವೆಷ್ಟು (ಟೋಲ್ ಪ್ಲಾಜಾವಾರು ಮಾಹಿತಿ ನೀಡುವುದು) | ಪ್ರಸ್ತಾಪಿತ ಟೋಲ್ ಪ್ಲಾಜಾಗಳಲ್ಲಿ ಪ್ರಾರಂಭದಿಂದ ಇದುವರೆವಿಗೆ ಸಂಗ್ರಹಿಸಲಾದ ಮೊತ್ತದ ವಿವರಗಳನ್ನು ಅನುಬಂಧ -2 ರಲ್ಲಿ ನೀಡಿದೆ. |

<table>
<tr>
<td>(ಈ)</td>
<td>ಈ ಟೋಲ್ ಪ್ಲಾಜಾಗಳು ಶುಲ್ಕವನ್ನು ವಸೂಲಾತಿ ಮಾಡಲು ಇರುವ ನಿಯಮ/ನಿಭಂದನೆಗಳೇನು;</td>
<td>ಟೋಲ್ ಗೇಟ್‌ನಲ್ಲಿ ಟೋಲ್ ಸಂಗ್ರಹಿಸಲು ವಿವಿಧ ವಾಹನಗಳನ್ನು 6 ವಿಭಾಗಗಳಲ್ಲಿ ವರ್ಗೀಕರಿಸಿ ದರಗಳನ್ನು ನಿಗದಿಪಡಿಸಲಾಗಿದ್ದು ಈ ದರಗಳು ಪ್ರತಿ ರಸ್ತೆಯ ಉದ್ದ, ರಸ್ತೆಯ ಪಥಗಳು ಮತ್ತು ರಸ್ತೆಯಲ್ಲಿರುವ ಸೇತುವೆಗಳು ಮತ್ತು ಬೈಪಾಸ್ ಗಳನ್ನು ಪರಿಗಣಿಸಿ ಸರ್ಕಾರದ ಟೋಲ್ ಅಧಿಸೂಚನೆ 2015ರ ಅನ್ವಯ ದರಗಳನ್ನು ನಿಗದಿಪಡಿಸಲಾಗುತ್ತದೆ. ಈ ಕೆಳಕಂಡ 6 ವಾಹನ ಮಾದರಿಗಳಿಗೆ ಏಕ ಪ್ರಯಾಣ, ಪುನರಾಗಮನ ಮತ್ತು ಮಾಸಿಕ ಪಾಸ್ ಗಳಿಗೆ ವಿವಿಧ ದರಗಳು ನಿಗದಿಯಾಗಿದ್ದು ಇದಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ರಾಜ್ಯ ಪತ್ರದಲ್ಲಿ ಅಧಿಸೂಚನೆ ಪ್ರಕಟಿಸಲಾಗಿರುತ್ತದೆ.
<table>
<tr><th>ಕ್ರಸಂ</th><th>ವಾಹನ ಮಾದರಿ</th></tr>
<tr><td>1</td><td>ಕಾರು/ಜೀಪು/ವ್ಯಾನು ಅಥವಾ ಲಘು ವಾಹನ</td></tr>
<tr><td>2</td><td>ಲಘು ವಾಣಿಜ್ಯ ವಾಹನ, ಲಘು ಗೂಡ್ಸ್ ವಾಹನ ಅಥವಾ ಮಿನಿ ಬಸ್</td></tr>
<tr><td>3</td><td>ಬಸ್, ವಾಣಿಜ್ಯ ವಾಹನ (ಎರಡು ಆಕ್ಸಲ್)</td></tr>
<tr><td>4</td><td>ಬಸ್, ವಾಣಿಜ್ಯ ವಾಹನ (ಮೂರು ಆಕ್ಸಲ್)</td></tr>
<tr><td>5</td><td>ಭಾರಿ ನಿರ್ಮಾಣ ಯಂತ್ರೋಪಕರಣ (HCM), ಅರ್ಥ ಮೂವಿಂಗ್ ಎಕ್ವಿಪ್ ಮೆಂಟ್ (EME) ಅಥವಾ ಮಲ್ಟಿ ಆಕ್ಸಲ್ ವಾಹನ (MAV) (ನಾಲ್ಕು ರಿಂದ ಆರು ಆಕ್ಸಲ್)</td></tr>
<tr><td>6</td><td>ಭಾರಿ ಗಾತ್ರದ ವಾಹನಗಳು (ಏಳು ಅಥವಾ ಹೆಚ್ಚಿನ ಆಕ್ಸಲ್‌ಗಳು)</td></tr>
</table>
ಈ ಕೆಳಕಂಡಂತೆ ವರ್ಗೀಕರಿಸಿರುವ ವಾಹನಗಳಿಗೆ ಟೋಲ್ ಪಾವತಿಯಿಂದ ವಿನಾಯತಿ ನೀಡಲಾಗಿದೆ.<br>
1. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಎಲ್ಲಾ ವಾಹನಗಳು, ರಾಜ್ಯ ಸರ್ಕಾರ ಸ್ವಾಮ್ಯ ಸಂಸ್ಥೆಗಳ ವಾಹನಗಳು ಮತ್ತು ಅಧಿಕೃತ ಪರವಾನಗಿ (Pass) ಹೊಂದಿದ್ದು ಸರ್ಕಾರದ ಕಾರ್ಯಗಳಿಗೆ ಉಪಯೋಗಿಸುವ ಖಾಸಗಿ ವಾಹನಗಳು, ಹಳದಿ ರಿಜಿಸ್ಟ್ರೇಷನ್ ನಂಬರ್ ಹೊಂದಿರುವ ವಾಹನಗಳೂ ಸೇರಿದಂತೆ ಆದರೆ ವಾಣಿಜ್ಯ ಮತ್ತು ಸರಕು ಸಾಗಾಣಿಗೆ ವಾಹನಗಳನ್ನು ಹೊರತುಪಡಿಸಿ<br>
2. ಲೋಕಸಭೆಯ ಮಾನ್ಯ ಸದಸ್ಯರುಗಳ ವಾಹನ ಮತ್ತು ವಿಧಾನ ಸಭೆಯ ಮಾನ್ಯ ಸದಸ್ಯರುಗಳ ವಾಹನ<br>
3. ರಕ್ಷಣಾ ಇಲಾಖೆಯ ವಾಹನಗಳು, ಭಾರತ ಅಂಚೆ ಮತ್ತು ತಂತಿ ಇಲಾಖೆ ಹಾಗೂ ಕೇಂದ್ರ ಸರ್ಕಾರದ ಸೇವೆಯಲ್ಲಿರುವ ವಾಹನಗಳು<br>
4. ಕೇಂದ್ರ ಮತ್ತು ರಾಜ್ಯ ಸರ್ಕಾರದ ಶಸ್ತ್ರ ಸಜ್ಜಿತ ಸಮವಸ್ತ್ರ ಹೊಂದಿರುವ ಸೈನಿಕ ವಾಹನಗಳು ಹಾಗೂ ಅರೆ ಸೈನಿಕ ವಾಹನಗಳು ಮತ್ತು ಆರಕ್ಷಕರ ವಾಹನಗಳು<br>
5. ಅಂತರ ರಾಷ್ಟ್ರೀಯ/ರಾಷ್ಟ್ರೀಯ ಪ್ರತಿಷ್ಠಿತ ಪುರಸ್ಕಾರ ಪಡೆದು ಅಂತಹ ಪುರಸ್ಕೃತದಾರರು ಅಧಿಕೃತ ಅಥವಾ ಸಕ್ಷಮ ಪ್ರಾಧಿಕರದಿಂದ ಧೃಡೀಕರಣ ಹೊಂದಿರುವ ಭಾವ ಚಿತ್ರವಿರುವ ಗುರುತಿನ ಚೀಟಿಯನ್ನು ನೀಡಿದಲ್ಲಿ ಅವರ ವಾಹನಗಳು<br>
6. ಅಧಿಕೃತ ಅಥವಾ ಸಕ್ಷಮ ಪ್ರಾಧಿಕಾರದಿಂದ ನೀಡಲಾಗಿರುವ ಭಾವ ಚಿತ್ರವಿರುವ ಗುರುತಿನ ಚೀಟಿಯನ್ನು ಸಲ್ಲಿಸುವ ಸ್ವಾತಂತ್ರ</td>
</tr>
</table>

| | | |
|---|---|---|
| | | ಹೋರಾಟಗಾರರಿಗೆ ಸೇರಿದ ವಾಹನ ಮತ್ತು ಮಾನ್ಯತೆ ಪಡೆದ (Accredited) ಪತ್ರಕರ್ತರ ವಾಹನಗಳು.<br>1. ಆಂಬ್ಯುಲೆನ್ಸ್ ವಾಹನಗಳು.<br>2. ಬೆಂಕಿ ನಂದಿಸುವ ವಾಹನಗಳು (fire fighting vehicles)<br>3. ಶವ ಸಾಗಿಸುವ ವಾಹನಗಳು<br>4. ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳು, ಜಾನುವಾರಗಳಿಂದ ಎಳೆಯಲ್ಪಡುವ ವಾಹನಗಳು ವ್ಯವಸಾಯೋತ್ಪನ್ನಗಳನ್ನು ಸಾಗಿಸುವ ವಾಹನಗಳು ಹಾಗೂ ಟ್ರಾಕ್ಟರ್‌ಗಳು – ಈ ವಾಹನಗಳಿಗೆ ಟೋಲ್ ಕರವನ್ನು ವಿಧಿಸಲಾಗುವುದಿಲ್ಲ. |
| (ಉ) | ಸದರಿ ಟೋಲ್ ಪ್ಲಾಜಾಗಳು ಅದಕ್ಕೆ ಸಂಬಂಧಿಸಿದ, ರಸ್ತೆ ಸರ್ವೀಸ್ ರಸ್ತೆ ಇತ್ಯಾದಿಗಳ ಎಲ್ಲಾ ಕಾಮಗಾರಿಗಳನ್ನು ಪೂರೈಸಿದ ನಂತರವೇ ಶುಲ್ಕ ವಿಧಿಸಲು ಪ್ರಾರಂಭಿಸಲಾಗಿದೆಯೇ ಇಲ್ಲದಿದ್ದರೆ ಅಂತಹ ಟೋಲ್ ಪ್ಲಾಜಾಗಳು ಯಾವುವು (ವಿವರ ನೀಡುವುದು) | ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ಟೋಲ್ ಶುಲ್ಕ ವಸೂಲಾತಿ ಮಾಡಲಾಗುತ್ತಿರುವ ರಸ್ತೆಗಳು ಮೂರು ಮಾದರಿಯಾಗಿರುತ್ತದೆ.<br>1) ಕೆ.ಆರ್.ಡಿ.ಸಿ.ಎಲ್ ಹಾಗೂ ಕೆಶಿಫ್ ಸಂಸ್ಥೆಗಳಿಂದ ಅಭಿವೃದ್ಧಿ ಪಡಿಸಿರುವ ರಸ್ತೆಗಳಲ್ಲಿ ವಾರ್ಷಿಕ ಗುತ್ತಿಗೆಯಾಧಾರದ ಮೇಲೆ ಟೋಲ್ ಗುತ್ತಿಗೆದಾರರನ್ನು ನೇಮಿಸಿ ರಸ್ತೆ ಬಳಕೆದಾರರ ಟೋಲ್ ಶುಲ್ಕ ವಸೂಲಾತಿಯನ್ನು ಪ್ರಾರಂಭಿಸಲಾಗುತ್ತದೆ.<br>2) ಅನ್ಯೂಟಿ ಗುತ್ತಿಗೆಗಳಿಂದ ಅಭಿವೃದ್ಧಿ ಪಡಿಸಲಾದ ರಸ್ತೆಗಳಲ್ಲಿ ರಸ್ತೆ ಕಾಮಗಾರಿಗಳು ಪೂರ್ಣಗೊಂಡಿದ್ದು ಇತರೆ ಸಂಯೋಜಿತ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿ ಇರುವಾಗ ರಸ್ತೆ ಬಳಕೆದಾರರ ಟೋಲ್ ಶುಲ್ಕ ವಸೂಲಾತಿಯನ್ನು ಪ್ರಾರಂಭಿಸಲಾಗುತ್ತದೆ.<br>3) ಪಿಪಿಪಿ ಮಾದರಿ ಗುತ್ತಿಗೆಗಳಲ್ಲಿ ಅಭಿವೃದ್ಧಿ ಪಡಿಸಲಾದ ರಸ್ತೆಗಳಲ್ಲಿ ರಿಯಾಯಿತಿದಾರರೇ ಬ್ಯಾಂಕ್‌ನಿಂದ ಸಾಲ ಪಡೆದು ಕಾಮಗಾರಿಗಳ ವೆಚ್ಚವನ್ನು ಹೂಡಿಕೆಮಾಡಿ ಬರುವ ಟೋಲ್ ಆದಾಯದಲ್ಲಿ ಬ್ಯಾಂಕ್ ಸಾಲವನ್ನು ತೀರಿಸಬೇಕಾಗಿದ್ದು, ಇಂತಹ ಗುತ್ತಿಗೆಗಳಲ್ಲಿ ರಸ್ತೆ ಕಾಮಗಾರಿಗಳು 75% ರಷ್ಟು ಪೂರ್ಣಗೊಂಡ ನಂತರ ಪೂರ್ಣಗೊಂಡ ರಸ್ತೆಗೆ ಅನುಗುಣವಾಗಿ ಟೋಲ್ ಶುಲ್ಕ ವಸೂಲಾತಿಯನ್ನು ಸಂಗ್ರಹಿಸಲು ರಿಯಾಯಿತಿ ಕರಾರಿನಲ್ಲಿ ಅವಕಾಶವಿರುತ್ತದೆ. (ವಿವರವನ್ನು ಅನುಬಂಧ–3 ರಲ್ಲಿ ನೀಡಿದೆ) |

ಸಂಖ್ಯೆ. ಲೋಇ E-83 ಇಎಪಿ 2021

(ಗೋವಿಂದ ಎಂ. ಕಾರಜೋಳ)
ಮಾನ್ಯ ಉಪ ಮುಖ್ಯಮಂತ್ರಿಗಳು,
ಲೋಕೋಪಯೋಗಿ ಇಲಾಖೆ

## ಅನುಬಂಧ-1

a. **ಕೆ.ಆರ್.ಡಿ.ಸಿ.ಎಲ್ ಹಾಗೂ ಕೆಶಿಫ್ ಸಂಸ್ಥೆಗಳಿಂದ ಅಭಿವೃದ್ಧಿ ಪಡಿಸಿರುವ** ಈ ಕೆಳಕಂಡ ರಸ್ತೆಗಳಲ್ಲಿ ಬಳಕೆದಾರರ ಶುಲ್ಕವನ್ನು (User Fee) ಸಂಗ್ರಹಣೆ ಮಾಡಲು ಸರ್ಕಾರಿ ಆದೇಶ ಸಂಖ್ಯೆ :ಲೋಇ 118 ಇಎಪಿ 2016 ಬೆಂಗಳೂರು ದಿನಾಂಕ:31-03-2017 ರಲ್ಲಿ ಅನುಮೋದನೆ ನೀಡಲಾಗಿದೆ. ಈ ಕೆಳಕಂಡ ರಸ್ತೆಗಳಲ್ಲಿ ಶುಲ್ಕ ಸಂಗ್ರಹಣಾ ಪ್ರಾರಂಭವಾಗಿರುತ್ತದೆ:

| ಕ್ರಸಂ | ರಸ್ತೆಯ ಹೆಸರು |
|---|---|
| 1 | ಧಾರವಾಡ-ಕರಡಿಗುಡ್ಡ-ಸವದತ್ತಿ ರಸ್ತೆ |
| 2 | ಹೊಸಕೋಟೆಯಿಂದ ಚಿಂತಾಮಣಿ ಬೌಪಾಸ್ ರಸ್ತೆ |
| 3 | ಹಾವೇರಿ-ಅಕ್ಕಿಆಲೂರು-ಹನಗಲ್ ರಸ್ತೆ |
| 4 | ಮುದೋಳ್-ಚಿಕ್ಕೋಡಿ-ನಿಪ್ಪಾಣಿ ರಸ್ತೆ |
| 5 | ಶೆಲ್ವಾಡಿ-ಮುಂಡರಗಿ ರಸ್ತೆ |
| 6 | ಹುಬ್ಬಳ್ಳಿ-ಕುಂದಗೋಳ-ಲಕ್ಷ್ಮೇಶ್ವರ ರಸ್ತೆ |
| 7 | ಮುದಗಲ್-ತಾವರೆಕೆರೆ-ಗಂಗಾವತಿ ರಸ್ತೆ |
| 8 | ಮಾಗಡಿ-ಪಾವಗಡ-ಎಪಿ ಬಾರ್ಡರ್ ರಸ್ತೆ |
| 9 | ಮಳವಳ್ಳಿ-ಮದ್ದೂರು-ಕೊರಟಗೆರೆ ರಸ್ತೆ |
| 10 | ಸಿಂಧನೂರು-ತಾವರೆಕೆರೆ-ಕುಷ್ಟಗಿ ರಸ್ತೆ |

b. **ಹುಡ್ಕೋ (HUDCO) ಸಾಲದ ನೆರವಿನಲ್ಲಿ ಅಭಿವೃದ್ಧಿ ಪಡಿಸಲಾಗಿರುವ** ಈ ಕೆಳಕಂಡ ರಸ್ತೆಯಲ್ಲಿ ಶುಲ್ಕ ಸಂಗ್ರಹಣೆ ಮಾಡಲಾಗುತ್ತಿದೆ.

| ಕ್ರಸಂ | ರಸ್ತೆಯ ಹೆಸರು |
|---|---|
| 1 | ಹೊಸಪೇಟೆ-ಸಂಡೂರು ರಸ್ತೆ |

c. **ಕರಅನಿನಿ ವತಿಯಿಂದ ಕೈಗೊಂಡ ಈ ಕೆಳಕಂಡ ಪಿಪಿಪಿ-ಡಿಬಿಎಫ್ಓಟಿ-ವಿಜಿಎಫ್** ರಸ್ತೆಗಳಲ್ಲಿ ನಿರ್ಮಾಣ ವೆಚ್ಚವನ್ನು ರಿಯಾಯಿತಿದಾರರು ಹೂಡಿಕೆಮಾಡಿ ಅಭಿವೃದ್ಧಿ ಪಡಿಸಿದ್ದು, ಸರ್ಕಾರದ ಅನುಮತಿಯಂತೆ ಸದರಿ ರಸ್ತೆಗಳಲ್ಲಿ ರಿಯಾಯಿತಿದಾರು ನಿರ್ಧಿಷ್ಟ ಅವಧಿಯ ವರೆಗೆ ಶುಲ್ಕ ವಸೂಲಾತಿ ಮಾಡುವರು.

| ಕ್ರಸಂ | **ರಸ್ತೆಯ ಹೆಸರು** |
|---|---|
| 1 | ಯಲಹಂಕ-ಆಂಧ್ರ ಪ್ರದೇಶ ಗಡಿ ರಸ್ತೆ |
| 2 | ಗಿಣಿಗೆರೆ-ಗಂಗಾವತಿ ರಸ್ತೆ |
| 3 | ಧಾರವಾಡ-ರಾಮನಗರ ರಸ್ತೆ |
| 4 | ವಾಗ್ದಾರಿ-ರಿಬ್ಬನಪಲ್ಲಿ ರಸ್ತೆ |

d. **ವಿಶ್ವಬ್ಯಾಂಕ್ ನೆರವಿನ ಯೋಜನೆಯಡಿಯಲ್ಲಿ ಕೆ.ಆರ್.ಡಿ.ಸಿ.ಎಲ್ ನಿಂದ ಅಭಿವೃದ್ಧಿ ಪಡಿಸಲಾದ** ಈ ಕೆಳಕಂಡ 5 ರಸ್ತೆಗಳಲ್ಲಿ ಬಳಕೆದಾರರ ಶುಲ್ಕವನ್ನು ಸಂಗ್ರಹಿಸಲು ಸರ್ಕಾರಿ ಆದೇಶ ಸಂಖ್ಯೆ: ಲೋಇ76 ಇಎಪಿ2014 ಬೆಂಗಳೂರು ದಿನಾಂಕ: 23-03-2016 ರಲ್ಲಿ ಅನುಮೋದನೆ ನೀಡಲಾಗಿದ್ದು ಶುಲ್ಕ ಸಂಗ್ರಹಣೆ ಚಾಲ್ತಿಯಿರುತ್ತದೆ.

| ಕ್ರ.ಸಂ | ರಸ್ತೆಯ ಹೆಸರು |
|---|---|
| 1 | ಬಾಗೆವಾಡಿ-ಸವದತ್ತಿ ರಸ್ತೆ |
| 2 | ಹಾಸನ-ಪಿರಿಯಾಪಟ್ಟಣ ರಸ್ತೆ |
| 3 | ಹಿರೇಕೆರೂರು-ರಾಣಿಬೆನ್ನೂರು ರಸ್ತೆ |
| 4 | ಮುಂಡರಗಿ-ಹರಪ್ಪನಹಳ್ಳಿ ರಸ್ತೆ |
| 5 | ಹುನಗುಂದ-ತಾಳಿಕೋಟೆ ರಸ್ತೆ |

## ಅನುಬಂಧ-2

| ಕ್ರ ಸಂ | ರಸ್ತೆಯ ಹೆಸರು | ರಾಜ್ಯ ಹೆದ್ದಾರಿ ಸಂ | ಟೋಲ್ ಪ್ಲಾಜಾಗಳ ಸಂಖ್ಯೆ | ಟೋಲ್ ಕಾರ್ಯಾರಂಭ ದಿನಾಂಕ | ಟೋಲ್ ಶುಲ್ಕ ವಸೂಲಿ ಪ್ರಾರಂಭ ದಿನಾಂಕ | ಟೋಲ್ ಶುಲ್ಕ ಸಂಗ್ರಹಿಸಲಾದ ಮೊತ್ತ (ಫೆಬ್ರವರಿ ಅಂತ್ಯದ ವರೆಗೆ) ರೂ ಕೋಟಿಗಳಲ್ಲಿ |
|---|---|---|---|---|---|---|
| 1 | ಧಾರವಾಡ-ಕರಡಿಗುಡ್ಡ-ಸವದತ್ತಿ ರಸ್ತೆ | SH-34 | 1 | 18-02-2019 | 18-02-2019 | 2.57 |
| 2 | ಹೊಸಕೋಟೆಯಿಂದ ಚಿಂತಾಮಣಿ ಬೈಪಾಸ್ ರಸ್ತೆ | SH-49 | 1 | 25-10-2018 | 25-10-2018 | 8.04 |
| 3 | ಹಾವೇರಿ-ಅಕ್ಕಿಆಲೂರು-ಹನಗಲ್ ರಸ್ತೆ | SH-2 | 1 | 23-02-2019 | 23-02-2019 | 1.32 |
| 4 | ಮುದೋಳ್-ಚಿಕ್ಕೋಡಿ-ನಿಪ್ಪಾಣಿ ರಸ್ತೆ | SH-18 | 2 | 18-10-2019 | 18-10-2019 | 4.87 |
| 5 | ಶೆಲ್ವಾಡಿ-ಮುಂಡರಗಿ ರಸ್ತೆ | SH-45 | 1 | 16-01-2020 | 16-01-2020 | 1.15 |
| 6 | ಹುಬ್ಬಳ್ಳಿ-ಕುಂದಗೋಳ-ಲಕ್ಷ್ಮೇಶ್ವರ ರಸ್ತೆ | SH-73 | 1 | 23-01-2020 | 23-01-2020 | 1.00 |
| 7 | ಮುದಗಲ್-ತಾವರೆಕೆರೆ-ಗಂಗಾವತಿ ರಸ್ತೆ | SH-29 | 2 | 26-08-2020 | 26-08-2020 | 0.30 |
| 8 | ಮಾಗಡಿ-ಪಾವಗಡ-ಎಪಿ ಬಾರ್ಡರ್ ರಸ್ತೆ | SH-3 | 3 | 18-06-2020 | 18-06-2020 | 1.25 |
| 9 | ಮಳವಳ್ಳಿ-ಮದ್ದೂರು-ಕೊರಟಗೆರೆ ರಸ್ತೆ | SH-33 | 2 | 28-05-2020 | 28-05-2020 | 3.00 |
| 10 | ಸಿಂಧನೂರು-ತಾವರೆಕೆರೆ-ಕುಷ್ಟಗಿ ರಸ್ತೆ | SH-30 | 1 | 01-09-2020 | 01-09-2020 | 0.50 |
| 11 | ಹೊಸಪೇಟೆ-ಸಂಡೂರು ರಸ್ತೆ | SH-49 | 2 | 01-08-2020 | 01-08-2020 | 0.85 |
| 12 | ಬಾಗೆವಾಡಿ-ಸವದತ್ತಿ ರಸ್ತೆ | SH-1,30,31,73 | 1 | 27-12-2019 | 27-12-2019 | 1.03 |
| 13 | ಹಾಸನ-ಪಿರಿಯಾಪಟ್ಟಣ ರಸ್ತೆ | SH-21 | 3 | 23-01-2020 | 23-01-2020 | 1.54 |
| 14 | ಹಿರೇಕೆರೂರು-ರಾಣಿಬೆನ್ನೂರು ರಸ್ತೆ | SH-62,76 | 2 | 15-09-2019 | 15-09-2019 | 0.83 |
| 15 | ಮುಂಡರಗಿ-ಹರಪ್ಪನಹಳ್ಳಿ ರಸ್ತೆ | SH-45,47 | 1 | 13-12-2019 | 13-12-2019 | 1.05 |
| 16 | ಹುನಗುಂದ-ತಾಳಿಕೋಟೆ ರಸ್ತೆ | SH-41,60 | 2 | 31-12-2019 | 31-12-2019 | 0.54 |

| | | | | | | |
|---|---|---|---|---|---|---|
| 17 | ಯಲಹಂಕ–ಆಂಧ್ರ ಪ್ರದೇಶ ಗಡಿ ರಸ್ತೆ | SH-9 | 2 | 19–09–2018 | 19–09–2018 | ಕರಅನಿನಿ ಪತಿಯಿಂದ ಕೈಗೊಂಡ ಈ ಕೆಳಕಂಡ ಪಿಪಿಪಿ–ಡಿಬಿಎಫ್‌ಓಟಿ–ವಿಜಿಎಫ್ ರಸ್ತೆಗಳಲ್ಲಿ ನಿರ್ಮಾಣ ವೆಚ್ಚವನ್ನು ರಿಯಾಯಿತಿದಾರರು ಹೂಡಿಕೆಮಾಡಿ ಅಭಿವೃದ್ಧಿ ಪಡಿಸಿದ್ದು, ಸರ್ಕಾರದ ಅನುಮತಿಯಂತೆ ಸದರಿ ರಸ್ತೆಗಳಲ್ಲಿ ರಿಯಾಯಿತಿದಾರು ನಿರ್ಧಿಷ್ಟ ಅವಧಿಯ ವರೆಗೆ ಶುಲ್ಕ ವಸೂಲಾತಿ ಮಾಡುವರು. |
| 18 | ಗಿಣಿಗೆರೆ–ಗಂಗಾವತಿ ರಸ್ತೆ | SH-23 | 2 | 07–09–2015 | 07–09–2015 | |
| 19 | ಧಾರವಾಡ–ರಾಮನಗರ ರಸ್ತೆ | SH-34 | 2 | 27–08–2013 | 27–08–2013 | |
| 20 | ವಾಗ್ದಾರಿ–ರಿಬ್ಬನಪಲ್ಲಿ ರಸ್ತೆ | SH-10 | 4 | 18–08–2012 | 18–08–2012 | |

# ಅನುಬಂಧ-3

**ಪಿಪಿಪಿ-ಡಿಬಿಎಫ್‌ಓಟಿ-ವಿಜಿಎಫ್ ಮಾದರಿಯಲ್ಲಿ ಅಭಿವೃದ್ಧಿ ಮಾಡಲಾದ ರಸ್ತೆ ವಿವರ**

| ಕ್ರ.ಸಂ | ರಸ್ತೆಯ ಹೆಸರು |
|---|---|
| 1 | ಯಲಹಂಕ-ಆಂಧ್ರ ಪ್ರದೇಶ ಗಡಿ ರಸ್ತೆ |
| 2 | ಗಿಣಿಗೆರೆ-ಗಂಗಾವತಿ ರಸ್ತೆ |
| 3 | ಧಾರವಾಡ-ರಾಮನಗರ ರಸ್ತೆ |
| 4 | ವಾಗ್ದಾರಿ-ರಿಬ್ಬನಪಲ್ಲಿ ರಸ್ತೆ |